ತಿರುಪತಿಯಲ್ಲಿರುವ ವಸತಿಗೃಹಗಳು

2466 (3105) : ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ಉಸ್ತುವಾರಿಯಲ್ಲಿ ತಿರುಪತಿಯಲ್ಲಿರುವ ವಸತಿ ಗೃಹಗಳು ಎಷ್ಟು;

ಆ) ಈ ವಸತಿಗೃಹಗಳಲ್ಲಿ ಯಾತ್ರಾರ್ಥಿಗಳಲ್ಲಿ ದೊರೆಯುವ ಸೌಲಭ್ಯಗಳೇನು; ದಿನವೊಂದಕ್ಕೆ ಎಷ್ಟು ಜನ ಯಾತ್ರಾರ್ಥಿಗಳು ತಂಗಲು ಅವಕಾಶವಿದೆ;

ಇ) ಈ ವಸತಿ ಗೃಹಗಳಿಂದ ಸರ್ಕಾರಕ್ಕೆ ವಾರ್ಷಿಕವಾಗಿ ಬರುವ ಆದಾಯ ಹಾಗೂ ಖರ್ಚು ಎಷ್ಟು?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು):

ಅ) ರಾಜ್ಯ ಸರ್ಕಾರದ ಉಸ್ತುವಾರಿಯಲ್ಲಿ ಈ ಕೆಳಕಂಡ ವಸತಿ ಗೃಹಗಳು ಇರುತ್ತವೆ:

1.	ಕರ್ನಾಟಕ ಪ್ರವಾಸಿ ಸೌಧ	51 ಕೊಠಡಿಗಳು
2.	ಕರ್ನಾಟಕ ಕಲ್ಯಾಣ ಮಂಟಪ	24 ಕೊಠಡಿಗಳು
3.	ಅತಿಥಿ ಗೃಹ	8 ಕೊಠಡಿಗಳು
4.	ಕಾಟೇಜ್	17 ಕಾಟೇಜ್
		(52 ಕೊಠಡಿಗಳು)

ಆ) ತಿರುಮಲ ಕ್ಷೇತ್ರದಲ್ಲಿನ ವಸತಿ ಗೃಹಗಳಲ್ಲಿ ತಂಗಲು ಬರುವ ಯಾತ್ರಾರ್ಥಿಗಳಿಗೆ ಬಾಡಿಗೆ ಆಧಾರದ ಮೇಲೆ ಕೊಠಡಿಯನ್ನು ನೀಡಿ ಉತ್ತಮ ವಸತಿ ಸೌಕರ್ಯ ಕಲ್ಪಿಸಲಾಗುತ್ತಿದೆ. ಈ ವಸತಿ ಗೃಹಗಳಲ್ಲಿ ದಿನ ಒಂದಕ್ಕೆ 500 ಜನ ಯಾತ್ರಾರ್ಥಿಗಳು ತಂಗಲು ಅವಕಾಶ ಇರುತ್ತದೆ.

ಇ) 2002–2003ನೇ ಸಾಲಿನಲ್ಲಿ ತಿರುಪತಿಯಲ್ಲಿನ ಕರ್ನಾಟಕ ರಾಜ್ಯ ಛತ್ರದಿಂದ ರೂ. 82.00 ಲಕ್ಷ ಆದಾಯ ಬಂದಿರುತ್ತದೆ. ಛತ್ರದ ನಿರ್ವಹಣೆಗಾಗಿ ರೂ. 72.00 ಲಕ್ಷ ಖರ್ಚು ಮಾಡಲಾಗಿರುತ್ತದೆ.

ಮುಜರಾಯಿ ದೇವಸ್ಥಾನಗಳ ಅಭಿವೃದ್ಧಿ

2467 (3106) : ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ತಾಲ್ಲೂಕು ವ್ಯಾಪ್ತಿಯ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ಅಭಿವೃದ್ಧಿಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;

ಆ) ಮುಜರಾಯಿ ದೇವಸ್ಥಾನಗಳ ಅರ್ಚಕರಿಗೆ ಈಗ ನೀಡುತ್ತಿರುವ ವೇತನವೆಷ್ಟು; ಈ ವೇತನವನ್ನು ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು):

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ಮುಜರಾಯಿ ಧಾರ್ಮಿಕ ಸಂಸ್ಥೆಗಳ ಅಭಿವೃದ್ಧಿ ಬಗ್ಗೆ ಸರ್ಕಾರವು ಕಳೆದ 5 ವರ್ಷಗಳ ಅವಧಿಯಲ್ಲಿ ಒಟ್ಟು 20